MYSORE LEGISLATIVE ASSEMBLY

TENTH DAY.

Tuesday, 15th March 1960.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI S. R. KANTHI, B.A., LL.B.) in the Chair.

Member's Representation.

ಶ್ರೀ ಮತಿ ನಾಗರತ್ನಮ್ಮ ಹಿರೇವಂಠ (ಗಾಂಧಿನಗರ).—ಕನ್ನಡದಲ್ಲಿ ಪ್ರಶ್ನೋತ್ತರಗಳು ನಮಗೆ ಇನ್ನೂ ಬಂದಿಲ್ಲ, ಕಾರಣವೇನು ?

ಅಧ್ಯಕ್ಷರು.—ಇಂಗ್ಲೀಷ್ ಪ್ರತಿಗಳು ಬಂದಿವೆ, ಕನ್ನಡದವು ಬರುತ್ತವೆ.

ಶ್ರೀ ಎಂ. ರಾಮಪ್ಪ (ಹರಿಹರ).—ಕನ್ನಡ ಪ್ರತಿಗಳೇ ಮುಂಚಿತವಾಗಿ ಬರಲಿ, ಇಂಗ್ಲೀಷಿಗೇಕೆ ಪ್ರಾಶಸ್ತ್ಯ ಕೊಡಬೇಕು ?

ಅಧ್ಯಕ್ಷರು.—ತರ್ಜುಮೆಯಾಗಿ ಮುದ್ರಣವಾಗ ಬೇಕಾಗಿರುವುದರಿಂದ ಸ್ವಲ್ಪ ತಡವಾಗುತ್ತದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯ್ಕನ ಹಳ್ಳಿ).—ಮೊದಲು ಕನ್ನಡದಲ್ಲಿ ಮುದ್ರಣಮಾಡಿಸಿ. ಆಮೇಲೆ ಇಂಗ್ಲೀಷ್ ಪ್ರತಿಗಳನ್ನು ಮುದ್ರಣ ಮಾಡಿಸ ಬಹುದು.

ಅಧ್ಯಕ್ಷರು.—ಸ್ವಲ್ಪ ತೊಂದರೆಯಿದೆ, ಅದನ್ನು ವಿಚಾರಮಾಡುತ್ತೇನೆ.

STARRED QUESTIONS

(to which oral answers were given).

Restoration and construction of tanks in Krishnarajpet Taluk.

*Q.—4. Sri M. K. BOMME GOWDA (Krishnarajapet).—

Will the Government be pleased to state :—

(*a*) the number of tanks newly constructed after 1957, in Krishnarajapet taluk and the amount spent on them ;

(*b*) the number of tanks for the construction of which estimates have been prepared and the reasons for the delay in taking up the work ;

(*c*) the number of tanks that have breached and since when ;

(*d*) whether steps have been taken to restore them ?

*A.—Sri H. M. CHANNABASAPPA (Minister for Public Works and Electricity).—

(*a*) Nil.

(*b*) Seven tanks. The estimates in respect of six of these are under technical scrutiny in the Department. Regarding the seventh, the estimate is sanctioned and tenders have been called for.

(*c*) Ten tanks have breached. Nine of them breached long ago, the date being not known. Only one tank breached in 1956.

(*d*) Yes. The feasibility of taking up the works is being examined.

ಶ್ರೀ ಎಂ. ಕೆ. ಬೊಮ್ಮೇಗೌಡ.—1957ರಿಂದೀಚೆಗೆ ಇಲ್ಲಿಯ ವರೆಗೆ ಎಷ್ಟು ಕೆರೆಗಳಾಗಿವೆ ಎಂದು ಕೇಳಿರುವ ಪ್ರಶ್ನೆಗೆ ಒಂದೂ ಇಲ್ಲವೆಂದು ತಿಳಿಸಿದ್ದೀರಿ ; ಹಾಗಿದ್ದರೆ ಇಲ್ಲಿಯ ವರೆಗೂ ಯಾವ ಕೆಲಸವನ್ನೂ ಮಾಡಿರುವುದಿಲ್ಲವೆ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಎಷ್ಟು ಹೊಸ ಕೆರೆಗಳನ್ನು ಕಟ್ಟಿದ್ದೀರಿ ಎಂದು ಕೇಳಿರುವುದು, ಅದಕ್ಕೆ ಇಲ್ಲವೆಂದು ಹೇಳಿದೆ, ಯಾವ ಕೆಲಸಗಳೂ ಆಗಿಲ್ಲವೆಂದು ಹೇಳಿಲ್ಲ. ಹೊಸ ಕೆರೆಗಳು ಅಲ್ಲಿ ನಿರ್ಮಾಣವಾಗಿಲ್ಲವೆಂದು ಹೇಳಿದೆ.

† Indicates that the remarks or speeches have not been revised by the member concerned.